|| Jai Gurudev ||

# ODIYOOR SHREE GURUDEVA VIDYAPEETAM

## Odiyoor Shree Gurudevadatta Samsthanam

### (Pre Primary, Primary and High School)

P.O.: ODIYOOR-574243, Karopady Village, Bantwal Tq, D.K. Karnakata (Tulunadu)

web: www.shreeodiyoor.org
email: shreegurudevakhs@gmail.com

Tel No: 08255-266850
Mobile No: 9895975237

ರಿಂದ,

ಮುಖ್ಯೋಪಾಧ್ಯಾಯರು

ರಿಗೆ,

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬಂಟ್ವಾಳ ತಾಲೂಕು
ಜೋಡುಮಾರ್ಗ ಬಿ ಸಿ ರೋಡ್

ವಿಷಯ : **ಪ್ರೌಢಶಾಲಾ ಮಕ್ಕಳಿಗೆ ತಾಲೂಕು ಮಟ್ಟದ ಪ್ರಬಂಧ ಸ್ಪರ್ಧೆಯನ್ನು ನಡೆಸುವ ಬಗ್ಗೆ,**

ಮಾನ್ಯರೇ,

ಪರಮಪೂಜ್ಯ ಒಡಿಯೂರು ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಗಳವರ ಹುಟ್ಟುಹಬ್ಬವು ಸಾಮಾಜಿಕ ಹಿತದ ಗ್ರಾಮ ಸ್ವಚ್ಛತೆ, ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ನಿರ್ಮಾಣ, ಔಷಧೀಯ ಗಿಡ ಬೆಳೆಸುವಿಕೆ ಇನ್ನಿತ್ಯಾದಿ ಧ್ಯೇಯೋದ್ದೇಶಗಳೊಂದಿಗೆ ಹಲವಾರು ವರ್ಷಗಳಿಂದ 'ಗ್ರಾಮೋತ್ಸವ'ವಾಗಿ ಆಚರಿಸಲ್ಪಡುತ್ತಿದೆ. ಈ ಪ್ರಯುಕ್ತ ಪ್ರಸಕ್ತ ವರ್ಷ ದಿನಾಂಕ 29/07/2019 ರಂದು ಆಚರಿಸಲ್ಪಡುವ ಗ್ರಾಮೋತ್ಸವದ ಅಂಗವಾಗಿ, ಮಕ್ಕಳಲ್ಲಿ ಸಾಮಾಜಿಕ ಜಾಗೃತಿಯನ್ನು ಉಂಟುಮಾಡುವ ನಿಟ್ಟಿನಲ್ಲಿ ದಿನಾಂಕ 15/07/2019ರ ಸೋಮವಾರದಂದು ಒಡಿಯೂರು ಶ್ರೀ ಗುರುದೇವ ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ಮಕ್ಕಳಿಗೆ (8ರಿಂದ 10ನೇ ತರಗತಿ) **'ನಾನು ಮತ್ತು ಭಾರತ', 'ಸ್ವಚ್ಛ ಭಾರತ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ', 'ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ', 'ಸಂಸ್ಕಾರಯುತ ಶಿಕ್ಷಣದಿಂದ ಭವ್ಯಭಾರತದ ನಿರ್ಮಾಣ'** ಎಂಬ ಪ್ರಬಂಧ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯದ ಕುರಿತು ತಾಲೂಕು ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದಾಗಿ ನಿರ್ಧರಿಸಿದ್ದೇವೆ. ಆದುದರಿಂದ ಈ ಸ್ಪರ್ಧೆಯನ್ನು ನಡೆಸಲು ತಮ್ಮ ಅನುಮತಿಯನ್ನು ನೀಡಬೇಕಾಗಿ ಮತ್ತು ಎಲ್ಲಾ ಶಾಲೆಗಳಿಗೆ ಮಾಹಿತಿಯನ್ನು ಕಳುಹಿಸಿಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಸಪ್ರೇಮ ವಂದನೆಗಳೊಂದಿಗೆ,

6/7/19

ಸ್ಥಳ : ಒಡಿಯೂರು

ದಿನಾಂಕ : 27/06/2019

Headmaster
Shree Gurudeva English Medium High School, Odiyoor
P.O.: Odiyoor, Karopady Village
Bantwal Tq. - 574243. D.K.



Scanned by CamScanner

ಸ್ಪರ್ಧೆಯ ನಿಯಮಗಳು:-

1. ಮೇಲೆ ತಿಳಿಸಿದ 4 ವಿಷಯಗಳಲ್ಲಿ ಒಂದು ವಿಷಯವನ್ನು ಸ್ಪರ್ಧೆ ನಡೆಯುವ ಅರ್ಧ ಗಂಟೆಯ ಮೊದಲು ಚೀಟಿ ಎತ್ತುವ ಮೂಲಕ ಆಯ್ಕೆಮಾಡಲಾಗುವುದು.
2. ಭಾಗವಹಿಸುವ ವಿದ್ಯಾರ್ಥಿಯ ಹೆಸರು, ತರಗತಿಯೊಂದಿಗೆ ಮುಖ್ಯೋಪಾಧ್ಯಾಯರ ಹೆಸರು ಮತ್ತು ಸಹಿ, ಸ್ಪಷ್ಟವಾದ ವಿಳಾಸ, ದೂರವಾಣಿ ಸಂಖ್ಯೆಯನ್ನು ನಮೂದಿಸಿ ದಿನಾಂಕ 12.07.2019ನೇ ಶುಕ್ರವಾರದ ಒಳಗಾಗಿ ಮೇಲೆ ಕಾಣಿಸಿದ ವಿಳಾಸಕ್ಕೆ ಕಳುಹಿಸುವುದು.
3. ಒಂದು ಶಾಲೆಯಿಂದ ಒಬ್ಬ ವಿದ್ಯಾರ್ಥಿಗೆ ಮಾತ್ರ ಅವಕಾಶ.
4. ಆಯ್ಕೆಯಾದ ಅತ್ಯುತ್ತಮ ಪ್ರಬಂಧಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ದಿನಾಂಕ 29.07.2019ನೇ ಸೋಮವಾರ ಗ್ರಾಮೋತ್ಸವದ ಸಭಾವೇದಿಕೆಯಲ್ಲಿ ನೀಡಲಾಗುವುದು.
5. ಸ್ಪರ್ಧೆ ನಡೆಯುವ ದಿನಾಂಕ: 15.07.2019, ಸ್ಥಳ: ಶ್ರೀ ಗುರುದೇವ ಪ್ರೌಢಶಾಲೆ ಒಡಿಯೂರು.

ಸಮಯ : ಬೆಳಗ್ಗೆ 10.00 ಗಂಟೆ, ಸಮಯಾವಕಾಶ: 1.30 ಗಂಟೆ, ಪ್ರಬಂಧವನ್ನು ಬರೆಯಲು ಕಾಗದ ಒದಗಿಸಲಾಗುವುದು.

ಅನುಮತಿ ನೀಡಿದೆ

**

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬಂಟ್ವಾಳ, ದ.ಕ.

Scanned by CamScanner